# ನವಿಲುಗನ್ನಡಿ

- ಜುಲೈ ತಿಂಗಳ ಸಂಚಿಕೆ ಬಹಳ ಆಕರ್ಷಕವಾಗಿತ್ತು. ರಹಮತ್ ತರೀಕೆರೆ ಅವರ ‘ಪ್ರೇಮಾಯತನ: ಕರ್ನಾಟಕದ ಸಾಬರಮತಿ’ ಲೇಖನ ಹಲವು ಮಹತ್ವದ ಅಂಶಗಳನ್ನು ದಾಖಲಿಸಿದೆ. ಪ್ರೇಮಾಯತನಕ್ಕೆ 100 ವರ್ಷ ತುಂಬಿದ ಸಂದರ್ಭದಲ್ಲಿ ಪಂಡಿತ ತಾರಾನಾಥರ ಕೆಲಸಗಳನ್ನು ಲೇಖನದಲ್ಲಿ ಬಹಳ ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ಎಷ್ಟು ಬಾರಿ ಓದಿದರೂ ಹೊಸದೇ ಅರ್ಥಗಳನ್ನು ಕೊಡುವ ಲ್ಯಾಟಿನ್ ಅಮೆರಿಕ ಕವಿ ಅಕ್ಟೇವಿಯಾ ಪಾಜ್ ಸಂದರ್ಶನ ‘ಕಾವ್ಯವು ಒಂಟಿತನ ಮತ್ತು ಸಮುದಾಯದ ನಡುವಿನ ಸೇತುವೆ’ (ಕನ್ನಡಕ್ಕೆ: ಹೇಮಾ ಎಸ್.) ಈ ಸಂಚಿಕೆಯ ಪ್ರಮುಖ ಆಕರ್ಷಣೆಯಾಗಿದೆ. ಅವರ ಮಾತುಗಳಲ್ಲಿ ಸಾರ್ವಕಾಲಿಕ ಸತ್ಯವಿದೆ.

**ಗಿರೀಶ್ ಕೆ., ಹುಬ್ಬಳ್ಳಿ**

- ಚಂದ್ರಕಾಂತ ವಡ್ಡು ಅವರ ‘ಇದು ‘ಬರಿ’ ಇಂಕು ಪೆನ್ನಲ್ಲ!’ ಪ್ರಬಂಧ ಇಷ್ಟವಾಯಿತು. ನಮ್ಮ ಓದಿನ ಕಾಲದ ಪೆನ್ ಪ್ರಸಂಗಗಳು ಕಣ್ಮುಂದೆ ಸುಳಿದವು.


**ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು**

- ‘ಇಂಕು’ ಪೆನ್ನಿನ ಬರಹ ಸೊಗಸಾಗಿತ್ತು, ಮನಕ್ಕೆ ಮುದನೀಡಿತು. ಹಲವು ನೆನಪುಗಳ ಮೆರೆವಣಿಗೆಯನ್ನೂ ಅದು ಮಾಡಿಸಿತು.

**ಚೆನ್ನಬಸಪ್ಪ ಪಾಟೀಲ, ರಾಯಚೂರು**

- ನಾಗೇಶ ಹೆಗಡೆ ಅವರ ಪ್ರಬಂಧ ‘ಪಾಂಡಿಚೇರಿಯ ಪಡ್ಡೋಲಗದಲ್ಲಿ ಥ್ರೀಡೀ ದೋಸೆ’ ತನ್ನ ಸರಳ ಭಾಷೆಯಿಂದ, ವೈಜ್ಞಾನಿಕ ವಿಶ್ಲೇಷಣೆಯಿಂದ ಮನಮುಟ್ಟಿತು. ಪ್ರಬಂಧಕ್ಕೆ ಬಿ.ಜಿ. ಗುಜ್ಜಾರಪ್ಪ ಅವರು ಬರೆದ ಚಿತ್ರಗಳು ಸೊಗಸಾಗಿವೆ.

**ಪ್ರವೀಣಾ ಕೆ.ಎಸ್., ಸಾಗರ**




- ಪ್ರಬಂಧ ‘ಪಾಂಡಿಚೇರಿಯ ಪಡ್ಡೋಲಗದಲ್ಲಿ...’ ಸ್ವಾರಸ್ಯಕರವಾಗಿತ್ತು. ಇದು ನಿಜಕ್ಕೂ ಈ ಕಾಲಕ್ಕೆ ಬೇಕಾದ ಬರಹ.

**ಶಂಕರನಾರಾಯಣ ಭಟ್, ಹೊನ್ನಾವರ**

- ಕೆ. ಪ್ರಭಾಕರನ್ ಅನುವಾದಿಸಿದ (ಮಲಯಾಳಂ ಮೂಲ: ಪಿ. ವತ್ಸಲ) ‘ಕಾಗೆಗಳು’ ಕತೆ ಮನನೀಯವಾಗಿತ್ತು. ಸ. ರಘುನಾಥ, ಭಾಗ್ಯಜ್ಯೋತಿ ಹಿರೇಮಠ ಅವರ ಕವಿತೆಗಳು ಖುಷಿಕೊಡುವಂತಿವೆ.

**ಸುನೀಲ್ ಬಿ.ಕೆ., ಶಿವಮೊಗ್ಗ**

- ಆರತಿ ಘಟಿಕಾರ್ ಅವರ ಪ್ರಬಂಧವನ್ನು (ವಠಾರವೆಂಬ ಸ್ನೇಹ ಬಳ್ಳಿಯೂ ಮಾಮಿಯೆಂಬ ಕಳ್ಳಿಯೂ) ಓದುತ್ತಿದ್ದಂತೆ ಮನಸ್ಸು ಎರಡು ದಶಕಗಳ ಹಿಂದಿನ ನೆನಪಿಗೆ ಹೊರಳಿತು. ವಠಾರದ ಮಾಮಿ ಎಲ್ಲೆಡೆಯೂ ಇರಬಹುದಾದ, ಎಲ್ಲರನ್ನೂ ಕಾಡಿರಬಹುದಾದ ಸ್ನೇಹಜೀವಿ. ಇಂತಹದ್ದೇ ಮಾಮಿಯೊಂದಿಗೆ ನಾನೂ ಏಳು ವರ್ಷ ಹೋರಾಡಿ, ಜಗಳಾಡಿ, ಕಡೆಗೆ ಸ್ನೇಹಭಾವ ಬೆಸೆದುಕೊಂಡಿದ್ದ ದಿನಗಳು ಕಣ್ಮುಂದೆ ಬಂದವು.

**ಅಂಬಿಕಾ, ವಿಜಯಪುರ**